ಓ ಎಸ್ ನಂಃ 158/2019

ಪಿ ಡಬ್ಲ್ಯೂ ಃ 1

ದಿಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ವಕೀಲರಿಂದ :-

ತಮ್ಮ ಕುಟುಂಬದ ಮೂಲ ಕರ್ತ ಪುಟ್ಟಹೊನ್ನಯ್ಯ ಎಂದರೆ ಸರಿ. ಸದರಿ ಪುಟ್ಟಹೊನ್ನಯ್ಯ ರವರಿಗೆ 7 ಜನ ಮಕ್ಕಳು ಎಂದರೆ ಸರಿ. 1) ಹೊನ್ನಯ್ಯ, 2) ರಂಗಯ್ಯ, 3) ರೇವಯ್ಯ, 4) ಕಾಳಹೊನ್ನಯ್ಯ 5) ಮರಿಹೊನ್ನಯ್ಯ (ನನ್ನ ತಂದೆ), 6) ಚಿಕ್ಕಹೊನ್ನಯ್ಯ (ಪ್ರತಿವಾದಿ ಗಂಡ) 7) ದೊಡ್ಡಹೊನ್ನಯ್ಯ. ಪುಟ್ಟಹೊನ್ನಯ್ಯ ಮಾಗಡಿ ತಾಲ್ಲೂಕು, ತಿಗಳರ ಪಾಳ್ಯ ಗ್ರಾಮದ ವಾಸಿ ಎಂದರೆ ಸರಿ. ಪುಟ್ಟಹೊನ್ನಯ್ಯ ನವರು ತಿಗಳರ ಪಾಳ್ಯದಲ್ಲಿ ಹುಟ್ಟಿ ಬೆಳೆದಿದ್ದು ಅಲ್ಲಿಯೇ ಮರಣ ಹೊಂದಿದ್ದು ಅವರ ಅಂತ್ಯ ಸಂಸ್ಕಾರ ಸಹ ಅಲ್ಲಿಯೇ ನೆರವೇರಿರುತ್ತದೆ ಎಂದರೆ ಸರಿ. ತಮ್ಮ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಸೂರಪ್ಪನ ಹಳ್ಳಿ ಗ್ರಾಮ ಮತ್ತು ರಘುನಾಥ ಪುರದಲ್ಲಿ ಇದ್ದವು ಎಂದರೆ ಸರಿ. ತಮಗೆ ಪಿತ್ರಾರ್ಜಿತವಾಗಿ ಮಾಚೋಹಳ್ಳಿ ಮಲ್ಲಸಂದ್ರ ಗ್ರಾಮದಲ್ಲಿ ಇದ್ದವು ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಅವು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು. ಪುಟ್ಟಹೊನ್ನಯ್ಯ ಜೀವಿತಾವಧಿಯಲ್ಲಿ ಅವರ 7 ಮಕ್ಕಳು ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ನಾವುಗಳು ಮದುವೆ ಆದ ನಂತರ ಬೇರೆ ಬೇರೆ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ಪುಟ್ಟಹೊನ್ನಯ್ಯ ನವರ ಹಿರಿಯ ಮಗ ಹೊನ್ನಯ್ಯ ಮತ್ತು ರಂಗಯ್ಯನವರು ಮಾಗಡಿ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ರವರು ಕಲ್ಲೂರಿ ನಲ್ಲಿ ಇರುವ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಕಲ್ಲೂರು ಗ್ರಾಮದಲ್ಲಿ ಹೊನ್ನಯ್ಯ ಮತ್ತು ರಂಗಯ್ಯನವರು ವ್ಯವಸಾಯ ಮಾಡುತ್ತಿದ್ದ ಜಮೀನುಗಳಲ್ಲಿ ಮೊದಲು ಪುಟ್ಟಹೊನ್ನಯ್ಯ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪುಟ್ಟಹೊನ್ನಯ್ಯ ನವರು ಕಲ್ಲೂರು ಗ್ರಾಮದಲ್ಲಿ ಸರ್ಕಾರದ ಜಮೀನನ್ನು ಸಾಗೂವಳಿ ಮಾಡುತ್ತಿದ್ದು ಹೊನ್ನಯ್ಯ ಮತ್ತು ರಂಗಯ್ಯನವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮಾಗಡಿ ತಾಲ್ಲೂಕಿನ ಪಿ ಸಿ ಪಾಳ್ಯದಲ್ಲಿ ಕೆಲವು ಸ್ವತ್ತುಗಳಿದ್ದು ಸದರಿ ಸ್ವತ್ತುಗಳನ್ನು ಪುಟ್ಟಹೊನ್ನಯ್ಯ ನವರು ಕಾಳಯ್ಯನವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಹೊನ್ನಯ್ಯ ನವರು ತಮ್ಮ 4 ನೇ ಮಗ ರೇವಯ್ಯ, 5 ನೇ ಮಗ ಮರಿಹೊನ್ನಯ್ಯ ಮತ್ತು 7 ನೇ ಮಗ ಮರಿಹೊನ್ನಯ್ಯನವರಿಗೆ ತಿಗಳರ ಪಾಳ್ಯದಲ್ಲಿರುವ ಆಸ್ತಿಗಳನ್ನು ಬಿಟ್ಟು ಕೊಟ್ಟಿದ್ದಾರೆ ಎಂದರೆ

ಓ ಎಸ್ ನಂಃ 158/2019

ಪಿ ಡಬ್ಲ್ಯೂ ಃ 1

ಸರಿಯಲ್ಲ. ಪುಟ್ಟಹೊನ್ನಯ್ಯ ನವರಿಗೆ ಎಷ್ಟು ಜಮೀನುಗಳು ಇದ್ದು ಅವುಗಳನ್ನು ಯಾರು ಯಾರಿಗೆ ಭಾಗ ಮಾಡಿಕೊಟ್ಟಿದ್ದಾರೆ ಎಂದೆರ ನನಗೆ ಗೊತ್ತಿಲ್ಲ.

ಈ ದಾವೆಯ ವಾದಿ ನನ್ನ ತಾಯಿ. ತಮ್ಮ ತಾಯಿ ತಮ್ಮ ನಿತ್ಯ ಕರ್ಮಗಳನ್ನು ಅವರೇ ಮಾಡಿಕೊಳ್ಳುತ್ತಿದ್ದು ಈಗ ಅವರು ಮನೆಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ತಮ್ಮ ತಾಯಿಯವರು ಆರೋಗ್ಯ ವಾಗಿದ್ದರು ಸಹ ತಾವು ಅಧಿಕಾರ ಪತ್ರವನು ಪಡೆದುಕೊಂಡು ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ನರಸಮ್ಮ ರವರು ಮದುವೆ ಆದಾಗಿನಿಂದಲೂ ಸಹ ತಿಗಳರ ಪಾಳ್ಯ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ತಮ್ಮ ತಾಯಿಯವರ ತವರು ಮನೆ ಹುಲುವೇನಹಳ್ಳಿ. ನಾನು ಹುಟ್ಟಿ ಬೆಳೆದಿದ್ದು ತಿಗಳರ ಪಾಳ್ಯ ಗ್ರಾಮದಲ್ಲಿ. ಈಗಲೂ ಸಹ ಅಲ್ಲಿಯೇ ವಾಸವಾಗಿದ್ದೇನೆ. ನನ್ನ ತಾಯಿಗೂ ಹಾಗೂ ನನ್ನ ಕುಟುಂಬದ ಸದಸ್ಯರ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಎಲ್ಲವೂ ತಿಗಳರ ಪಾಳ್ಯ ಗ್ರಾಮಕ್ಕೆ ಸೇರಿದ್ದವು ಎಂದರೆ ಸರಿ. ನಾವು 4 ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದೇವೆ. ರಘುನಾಥಪುರ, ಮಾಚೋಹಳ್ಳಿ, ಮಲ್ಲಸಂದ್ರ ಮತ್ತು ಸೂರಪ್ಪನ ಹಳ್ಳಿ ಗ್ರಾಮದ ಸ್ವತ್ತುಗಳಾಗಿರುತ್ತವೆ. ತಮ್ಮ ತಾತ ಪುಟ್ಟಹೊನ್ನಯ್ಯ ರವರಿಗೆ ಸೇರಿದ 12 ಸ್ವತ್ತುಗಳು ಇದ್ದವು ಎಂದರೆ ಸರಿಯಲ್ಲ. ಪುಟ್ಟಹೊನ್ನಯ್ಯ ನವರು ಕುಟುಂಬಕ್ಕೆ ಸೇರಿದ ಸ್ವತ್ತುಗಳಲ್ಲಿ ಅವರ ಮಕ್ಕಳ ನಡುವೆ ವಿಭಾಗ ಪತ್ರ ಆಗಿತ್ತ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಪುಟ್ಟಹೊನ್ನಯ್ಯ ನವರು ಯಾವಾಗ ಮರಣ ಹೊಂದಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಆದರೆ ಆ ಸಮಯದಲ್ಲಿ ನಾನು ಜನಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**